ಒದಗಿಸಿಕೊಡಲಾಗಿದೆ. ಮುಂದೆ ರೂಪಿಸಿಕೊಳ್ಳುವ ಒಂದು ಕಾರ್ಯಕ್ರಮದ ಬಗ್ಗೆ ಕೆಲವು ಸೂಚನೆ ಹಾಗೂ ಮಾಹಿತಿಗಳನ್ನು ಒದಗಿಸಿಕೊಟ್ಟಿದ್ದಾರೆ. ಬೀದಿಯಲ್ಲಿ ಭಿಕ್ಷೆ ಬೇಡುವ ಮಕ್ಕಳ ಬಗ್ಗೆ ಒಂದು ಸಮೀಕ್ಷೆ ನಮ್ಮ ರಾಜ್ಯದಲ್ಲಿ ನಡೆಯಲಿಲ್ಲ. ಇದನ್ನು ನಡೆಸುವಂಥೆ ನಾವು ತೀರ್ಮಾನ ಮಾಡಬೇಕಾಗಿದೆ. ನಮ್ಮ ಸರ್ಕಾರ ಸಮೀಕ್ಷೆ ನಡೆಸುವುದರ ಬಗ್ಗೆ ಸಹ ಆಲೋಚನೆಯನ್ನು ಮಾಡುತ್ತಿದೆ. ಯಾವ ಮಕ್ಕಳು ಬೇಡುತ್ತಿದ್ದಾರೋ ಅವರಿಗೆ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರದ ಒಂದು ಜಂಟಿ ನಿರ್ದೇಶನಾಲಯಯಿಂದ ಆಶ್ರಯ ಹಾಗೂ ವಿದ್ಯಾಭ್ಯಾಸಕ್ಕೆ ಬೇಕಾದರೆ ಪರಿಹಾರವನ್ನು ನಾವು ಒದಗಿಸಿಕೊಡುತ್ತಿದ್ದೇನೆ. ಇದರ ಸಮೀಕ್ಷೆ ಇಡೀ ರಾಜ್ಯದಲ್ಲಿ ನಡೆದ ನಂತರ, ಜಿಲ್ಲಾ ಕೇಂದ್ರಗಳಲ್ಲಿ ಅಥವಾ ಇತರೆ ಕೇಂದ್ರಗಳಲ್ಲಿ ಪ್ರತ್ಯೇಕವಾಗಿ ಒಂದು ಕಟ್ಟಡವನ್ನು ಕಟ್ಟಿಸಿ ಇಂತಹ ಭಿಕ್ಷೆ ಬೇಡುವ ಮಕ್ಕಳ ಬಗ್ಗೆ ಮುಂದಿನ ದಿವಸಗಳಲ್ಲಿ ಒಂದು ಕಾರ್ಯಕ್ರಮ ಹಾಕಿಕೊಳ್ಳುವುದರ ಬಗ್ಗೆ ಸರ್ಕಾರ ಚಿಂತನೆ ಮಾಡುತ್ತದೆಂದು ನಾನು ತಮ್ಮ ಮೂಲಕ ಹೇಳುತ್ತೇನೆ.

ಶ್ರೀ ಕೆ.ಬಿ. ಕೋಳಿವಾಡ: ಎಷ್ಟು ಮಕ್ಕಳು ಯಾವ ಯಾವ ಸಂಸ್ಥೆಗಳಲ್ಲಿ ಇದರ ರಕ್ಷಣೆ ಪಡೆಯುತ್ತಿದ್ದಾರೆಂದು ಕೇಳಿದ್ದೇನೆ.

ಶ್ರೀ ಸಿ.ಆರ್. ಸಗೀರ್ ಅಹಮ್ಮದ್: ತಕ್ಷಣದಲ್ಲಿ ಮಾಹಿತಿ ಲಭ್ಯವಿಲ್ಲದಿರುವುದರಿಂದ ಪ್ರತ್ಯೇಕವಾಗಿ ಅದರ ಮಾಹಿತಿಯನ್ನು ಮಾನ್ಯ ಸದಸ್ಯರಿಗೆ ಕಳುಹಿಸಿಕೊಡುತ್ತೇನೆ.

ಶ್ರೀ ಎನ್. ಯೋಗೀಶ್ ಭಟ್: ಸರ್ಕಾರ ಗ್ರಾಂಟ್ ಕೊಡತಕ್ಕಂಥ ಅನಾಥಾಶ್ರಮಗಳಲ್ಲಿ ಇಂತಹ ಮಕ್ಕಳನ್ನು ಸೇರಿಸಿಕೊಳ್ಳುವಂಥ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕು. ಸಮೀಕ್ಷೆ ಮಾಡುವುದು ಕೆಲವು ವರ್ಷಗಳಾಗುತ್ತವೆ, ಅದಕ್ಕಾಗಿ ಅಂತಹದ್ದು ಏನಾದರೂ ಕಂಡುಬಂದಲ್ಲಿ ಸೇರಿಸುವಂಥ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿ.ಆರ್. ಸಗೀರ್ ಅಹಮ್ಮದ್: ಅಂತಹ ಬೇಡಿಕೆಗಳು ಬಂದಾಗ ಇಲಾಖೆ ತಕ್ಷಣ ಸ್ಪಂದಿಸುತ್ತದೆಂದು ಮಾನ್ಯ ಸದಸ್ಯರಿಗೆ ಹೇಳುತ್ತೇನೆ.

ರಾಜ್ಯದಲ್ಲಿ ಹೋಟೆಲ್ ಉದ್ದಿಮೆಯನ್ನು ಕೈಗಾರಿಕೆ ಎಂದು ಪರಿಗಣಿಸುವುದು

38(256) ಶ್ರೀ ಯೋಗೀಶ್ ಭಟ್ ಎನ್. (ಮಂಗಳೂರು): ಮಾನ್ಯ ಪ್ರವಾಸೋದ್ಯಮ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಹೋಟೆಲ್ ಉದ್ದಿಮೆಯನ್ನು ಕೈಗಾರಿಕೆ ಎಂದು ಪರಿಗಣಿಸುವಂತೆ ಬೇಡಿಕೆ ಸಲ್ಲಿಸಲಾಗಿದೆಯೆ, ಸಲ್ಲಿಸಿದ್ದಲ್ಲಿ ಯಾವಾಗ ಯಾರು ಸಲ್ಲಿಸಿರುತ್ತಾರೆ;

ಆ) ಕೈಗಾರಿಕೆ ಎಂದು ಪರಿಗಣಿಸುವ ಬಗ್ಗೆ ಸರ್ಕಾರದ ನಿಲುವೇನು;

ಇ) ಕೈಗಾರಿಕೆ ಎಂದು ಘೋಷಿಸಿದ ನಂತರ ಹೋಟೆಲ್ ಉದ್ಯಮದಾರರಿಗೆ ದೊರಕುವ ವಿಶೇಷ ಸವಲತ್ತುಗಳು ಯಾವುವು?

ಶ್ರೀ ಆರ್. ರೋಷನ್‌ಬೇಗ್ (ಪ್ರವಾಸೋದ್ಯಮ ಮತ್ತು ಹಜ್ ಸಚಿವರು):

ಅ) ಸರ್ಕಾರಿ ಆದೇಶ ಸಂಖ್ಯೆ: ಐಟಿವೈ 124 ಟಿಟಿಎಂ 84(2) ದಿನಾಂಕ 25-11-1988 ರಲ್ಲಿ ಪ್ರವಾಸೋದ್ಯಮ ಒಂದು ಕೈಗಾರಿಕೆ ಎಂದು ಘೋಷಿಸಲಾಗಿದೆ.

ಆ) ಉದ್ಭವಿಸುವುದಿಲ್ಲ.

ಇ) ಹೋಟೆಲಿನವರಿಗೆ ಈ ಕೆಳಕಂಡ ಸವಲತ್ತುಗಳನ್ನು ನೀಡಲಾಗುತ್ತದೆ.

1. ಬಂಡವಾಳ ಹೂಡಿಕೆ ಮೇಲೆ ಶೇಕಡ 10 ರಿಂದ 35 ರಷ್ಟು ಸಹಾಯಧನ ಗರಿಷ್ಠ ರೂ. 35.00 ಲಕ್ಷಗಳು.
2. 3 ರಿಂದ 7 ವರ್ಷಗಳವರೆಗೆ ಮಾರಾಟ ತೆರಿಗೆ : ವೈಭೋಗ ತೆರಿಗೆ ಪಾವತಿಯಲ್ಲಿ ವಿನಾಯಿತಿ ನೀಡಲಾಗುತ್ತಿತ್ತು, ದಿನಾಂಕ 1-1-2000 ರಿಂದ ದೇಶಾದ್ಯಂತ ಸಮಾನ ತೆರಿಗೆ ನೀತಿ ಜಾರಿಯಿಂದಾಗಿ ಈ ಸವಲತ್ತನ್ನು ರದ್ದುಪಡಿಸಲಾಗಿದೆ.
3. ಅಸಂಪ್ರದಾಯಿಕ ಇಂಧನ ಬಳಕೆಗೆ ಹೆಚ್ಚುವರಿ ಶೇಕಡ 15 ರಷ್ಟು ಧನ ಸಹಾಯ.
4. ಸ್ಟಾಂಪ್ ಡ್ಯೂಟಿ ಪಾವತಿಯಲ್ಲಿ ವಿನಾಯಿತಿ, ನೋಂದಣಿ ಶುಲ್ಕ ಪಾವತಿಯಲ್ಲಿ ರಿಯಾಯಿತಿ.
5. ವ್ಯವಸಾಯೇತರ ಉದ್ದೇಶಕ್ಕಾಗಿ ಭೂ ಪರಿವರ್ತನಾ ಶುಲ್ಕ ಪಾವತಿ ವಿನಾಯಿತಿ.
6. ಅಲ್ಪ ಸಂಖ್ಯಾತರು, ಮಹಿಳಾ ಉದ್ಯಮಿ, ಅಂಗವಿಕಲರು ಮತ್ತು ಮಾಜಿ ಸೈನಿಕರುಗಳಿಗೆ ಶೇಕಡ 5 ರಷ್ಟು ಹೆಚ್ಚುವರಿ ಸಹಾಯಧನ ಗರಿಷ್ಠ ರೂ. 1.00 ಲಕ್ಷ.
7. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಕ್ಕೆ ಸೇರಿದ ಉದ್ಯಮಿಗಳಿಗೆ ಶೇಕಡ 10 ರಷ್ಟು ಹೆಚ್ಚುವರಿ ಸಹಾಯಧನ ಗರಿಷ್ಠ ರೂ. 2.00 ಲಕ್ಷ ಮತ್ತು ಇದೇ ಉದ್ದೇಶಕ್ಕಾಗಿ ಜಮೀನನ್ನು ವಶಪಡಿಸಿಕೊಂಡಾಗ ನೋಂದಣಿ ಬೆಲೆಯ ಶೇಕಡ 20 ರಷ್ಟು, ಗರಿಷ್ಠ ರೂ. 2.00 ಲಕ್ಷಗಳವರೆಗೆ ಸಹಾಯಧನ.
8. ಯಾತ್ರಾ ಸ್ಥಳ ಹಾಗೂ ಗುರ್ತಿಸಲಾದ ಸ್ಥಳಗಳಲ್ಲಿ ಮುಜರಾಯಿ ಸಂಸ್ಥೆ ಅಥವಾ ಟ್ರಸ್ಟ್‌ಗಳು ನಿರ್ಮಿಸಲು ಛತ್ರ ಹಾಗೂ ಡಾರ್ಮಿಟರಿ ಮಾದರಿ ವಸತಿ ಸೌಲಭ್ಯ ನಿರ್ಮಾಣಕ್ಕಾಗಿ ಶೇಕಡ 20 ರಷ್ಟು, ಗರಿಷ್ಠ ರೂ. 10.00 ಲಕ್ಷಗಳವರೆಗೆ ಸಹಾಯಧನ.

ಶ್ರೀ ಎನ್. ಯೋಗೀಶ್ ಭಟ್: ಹೋಟೆಲ್ ಉದ್ದಿಮೆಗೆ ಪ್ರವಾಸೋದ್ಯಮಕ್ಕೆ, ಕೈಗಾರಿಕಾ ಸ್ಥಾನಮಾನವನ್ನು ಕೊಟ್ಟಿದ್ದೇವೆಂದು ತಾವು ಹೇಳಿರುತ್ತೀರಿ. ಇದಕ್ಕೆ ನನ್ನ ಸ್ವಾಗತವಿದೆ. ವಿದ್ಯುತ್ತ್‌ನ್ನು ಕಮರ್ಸಿಯಲ್ ದರದಲ್ಲಿ ಇವತ್ತು ಚಾರ್ಜ್ ಮಾಡುತ್ತಿದ್ದೀರಿ. ಕೈಗಾರಿಕೆಯ ದರದಲ್ಲಿ ಚಾರ್ಜ್ ಮಾಡುವುದಕ್ಕಾಗುತ್ತದೆಯೇ? ಕೃಷಿನಲ್ಲಿ, ಅಂದರೆ ದವಸ ಧಾನ್ಯಗಳ ಬೆಲೆ ನಮಗೆ ಗೊತ್ತಿದೆ. ಹೋಟೇಲುಗಳ ತಿಂಡಿಗಳ, ಪಾನಿಯಗಳ ಬೆಲೆ ಮಾತ್ರ ಇಳಿಕೆಯಾಗಿಲ್ಲ. ಆಂಧ್ರಪ್ರದೇಶ ಸರ್ಕಾರ ಮಾಡಿದಂತೆ ಗರಿಷ್ಠವಾದ ಒಂದು ಬೆಲೆ ಇರತಕ್ಕಂಥದ್ದು ಎಂದು ನಿಗದಿ ಮಾಡುವುದಕ್ಕೆ ಸರ್ಕಾರ ಯೋಚನೆ ಮಾಡುತ್ತಿದೆಯೆ?

ಶ್ರೀ ಆರ್. ರೋಷನ್ ಬೇಗ್: ಮಾನ್ಯ ಅಧ್ಯಕ್ಷರೆ, ನಮ್ಮದು ಪ್ರವಾಸೋದ್ಯಮ ಇಲಾಖೆ, ನಮಗೆ ಲೈಸನ್ಸ್ ಪವರ್ ಮಾತ್ರ. ಹೊಟೇಲ್ ರೇಟ್ ಬಗ್ಗೆ ನಮ್ಮ ಇಲಾಖೆಗೆ ಬರುವುದಿಲ್ಲ, ಇದು ಆಹಾರ ಮತ್ತು ನಾಗರೀಕ ಪೂರೈಕೆ ಇಲಾಖೆಗೆ ಬರುತ್ತದೆ.

ಚಿಕ್ಕಮಗಳೂರು ಜಿಲ್ಲೆ ಬೀರೂರು ಕ್ಷೇತ್ರದಲ್ಲಿ ಮೊರಾರ್ಜಿ ವಸತಿ ಶಾಲೆ ಪ್ರಾರಂಭಿಸುವುದು

93(1192) ಶ್ರೀ ಮಲ್ಲಿಕಾರ್ಜುನ ಕೆ.ಬಿ. (ಬೀರೂರು): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2001-2002ನೇ ಸಾಲಿನಲ್ಲಿ ಹೊಸದಾಗಿ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಪ್ರಾರಂಭಿಸಲು ಸರ್ಕಾರ ಯೋಚಿಸಿದೆಯೇ;

ಆ) ಚಿಕ್ಕಮಗಳೂರು ಜಿಲ್ಲೆ ಬೀರೂರು ಕ್ಷೇತ್ರದಲ್ಲಿ ಮೊರಾರ್ಜಿ ವಸತಿ ಶಾಲೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಈ ಕ್ಷೇತ್ರದಲ್ಲಿ ಮೊರಾರ್ಜಿ ವಸತಿ ಶಾಲೆಯನ್ನು ಸರ್ಕಾರ ಪ್ರಾರಂಭಿಸುವುದೇ?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು):

ಅ) ಹಣದ ಲಭ್ಯತೆಯನ್ನು ಅನುಸರಿಸಿ ಹೊಸ ಶಾಲೆಗಳನ್ನು ಮಂಜೂರು ಮಾಡುವ ಬಗ್ಗೆ ಪರಿಶೀಲಿಸಲಾಗುವುದು.

ಆ) ಚಿಕ್ಕಮಗಳೂರು ಜಿಲ್ಲೆ ಬೀರೂರು ಕ್ಷೇತ್ರದಲ್ಲಿ ಮೊರಾರ್ಜಿ ವಸತಿ ಶಾಲೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಆದರೆ ಇದೇ ಜಿಲ್ಲೆ ಈಗಾಗಲೇ 3 ವಸತಿ ಶಾಲೆಗಳು ನಡೆಯುತ್ತಿರುವ ಪ್ರಯುಕ್ತ ಹೆಚ್ಚುವರಿಯಾಗಿ ಮತ್ತೊಂದು ಶಾಲೆಯನ್ನು ಪ್ರಾರಂಭ ಮಾಡುವ ಅಗತ್ಯವಿರುವುದಿಲ್ಲ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ: ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರ ಒಂದು ವಿಚಿತ್ರವಾಗಿದೆ. ತಾಲ್ಲೂಕು ಕೇಂದ್ರವಿಲ್ಲ, ಸರ್ಕಾರದ ಯಾವುದೇ ಒಂದು ಯೋಜನೆ ಬಂದರೂ ಕೂಡ ಅದು ತಾಲ್ಲೂಕು ಕೇಂದ್ರ ಎಂದು ಬರುತ್ತದೆ, ಅದು ಚಿಕ್ಕಮಗಳೂರು ಮತ್ತು ತರೀಕೆರೆ ಹಾಗೂ ಕಡೂರು ಕ್ಷೇತ್ರಕ್ಕೆ ಹೋಗುತ್ತದೆ. ಯಾವುದೇ ಸೌಲಭ್ಯಗಳು ನನ್ನ ಕ್ಷೇತ್ರಕ್ಕೆ ಬಂದಿಲ್ಲ. ಆಶ್ರಯ ಯೋಜನೆಯಲ್ಲಿ ಅನ್ಯಾಯ, ಮೊರಾರ್ಜಿ ವಸತಿ ಶಾಲೆಗಳಲ್ಲಿ ಅನ್ಯಾಯ, ಹಾಸ್ಟೆಲ್‌ಗಳಲ್ಲಿ ಅನ್ಯಾಯ, ಇದರ ಬಗ್ಗೆ ನಾನು ಮಾನ್ಯ ಸಚಿವರಲ್ಲಿ ಅನೇಕ ಸಲ ಮನವಿಯನ್ನು ಮಾಡಿಕೊಂಡಿದ್ದೇನೆ. ನನ್ನ ಕ್ಷೇತ್ರದಲ್ಲಿರುವ ಬಡವರಿಗೆ ಅನ್ಯಾಯವಾಗಬಾರದೆನ್ನುವ ದೃಷ್ಟಿಯಿಂದ ಒಂದು ಮೊರಾರ್ಜಿ ದೇಸಾಯಿ ವಸತಿ ಶಾಲೆಯನ್ನು ಕೊಡಬೇಕೆಂದು ಮನವಿ ಮಾಡಿರುವುದರಿಂದ ಯಾವುದೇ ಆರ್ಥಿಕ ಪರಿಸ್ಥಿತಿಯನ್ನು ಹೇಳದೆ ಶಾಲೆಯನ್ನು ಮಂಜೂರು ಮಾಡಬೇಕೆಂದು ಕೇಳುತ್ತೇನೆ.